45	35	ಟ್ರೇಜರಿ ಕಾಲನಿ (ನಂದಿ ನಗರ)	ಇತರೆ
46	16	ಗಾಂಧಿನಗರ	ಇತರೆ
47	30	ಅಲ್ಲಿಕಾ ರೋಜಾ	ಅ.ಸಂ
48	4	ವಾಲ್ಮೀಕಾರ ವಸ್ತಿ (ಬೂಥನಾಳ)	ಇತರೆ
49	22	ಜಲನಗರ (EWS ಕ್ವಾಟರ್ಸ್)	ಇತರೆ
50	29	ಬಸವನಗರ	ಇತರೆ
51	32	ಗೊಂಧಳೆಗಲ್ಲಿ	ಇತರೆ

ಮಾಗಡಿ ಕ್ಷೇತ್ರದ ಸಾರ್ವಜನಿಕ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವುದು

377 (610) ಶ್ರೀ ಬಾಲಕೃಷ್ಣ. ಹೆಚ್.ಸಿ (ಮಾಗಡಿ) : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಮಾಗಡಿ ಹಾಗೂ ಬಿಡದಿ ಸಾರ್ವಜನಿಕ ಆಸ್ಪತ್ರೆಗಳನ್ನು ಎಷ್ಟು ಹಾಸಿಗೆಗಳಿಂದ ಎಷ್ಟು ಹಾಸಿಗೆಗೆ ಮೇಲ್ದರ್ಜೆಗೇರಿಸಲಾಗಿದೆ;

ಆ) ಈ ಆಸ್ಪತ್ರೆಗಳನ್ನು ಯಾವ ದಿನಾಂಕದಿಂದ ಮೇಲ್ದರ್ಜೆಗೇರಿಸ ಲಾಗಿದೆ; ಇದರ ಸ್ವರೂಪವೇನು;

ಇ) ಈ ಮೇಲ್ದರ್ಜೆಗನುಗುಣವಾಗಿ ಸುಸಜ್ಜಿತ ಕಟ್ಟಡದ ವ್ಯವಸ್ಥೆಗೆ ತೆಗೆದುಕೊಂಡಿರುವ ಕ್ರಮಗಳೇನು; ಈಗ ಯಾವ ಹಂತದಲ್ಲಿದೆ ಎಂಬುದರ ಸಂಪೂರ್ಣ (ವಿವರ ನೀಡುವುದು);

ಈ) ಈ ಆಸ್ಪತ್ರೆಗಳಿಗೆ ಮಂಜೂರಾತಿಯಾಗಿರುವ ವೈದ್ಯಕೀಯ ಹಾಗೂ ವೈದ್ಯಕೀಯೇತರ ಸಿಬ್ಬಂದಿ ಹಾಗೂ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯಕೀಯ ಹಾಗೂ ವೈದ್ಯಕೀಯೇತರ ಸಿಬ್ಬಂದಿಯ ಸಂಪೂರ್ಣ (ವಿವರ ನೀಡುವುದು);

ಉ) ಖಾಲಿಯಿರುವ ವೈದ್ಯಕೀಯ ಹಾಗೂ ವೈದ್ಯಕಿಯೇತರ ಸಿಬ್ಬಂದಿಯನ್ನು ತಕ್ಷಣವೇ ಭರ್ತಿ ಮಾಡಲಾಗುತ್ತದೆ ಎಂದು ತಿಳಿಸಿದ್ದರೂ ಸಹ ಇನ್ನೂ ಭರ್ತಿ ಮಾಡದೆ ಇರಲು ಕಾರಣಗಳೇನು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಮತ್ತು ಆ) ಮಾಗಡಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಮಾಗಡಿ ಸಾರ್ವಜನಿಕ ಆಸ್ಪತ್ರೆಯನ್ನು 30 ಹಾಸಿಗೆಗಳಿಂದ 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ದಿನಾಂಕ:4–2–2006ರ ಆದೇಶದಲ್ಲಿ ಮೇಲ್ದರ್ಜೆಗೇರಿಸ ಲಾಗಿದೆ. ಬಿಡದಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ದಿನಾಂಕ:19–3–1996ರ ಆದೇಶದಲ್ಲಿ ಮೇಲ್ದರ್ಜೆಗೇರಿಸಲಾಗಿದೆ.

ಇ) ತಾಲ್ಲೂಕು ಆಸ್ಪತ್ರೆ, ಮಾಗಡಿ ಮತ್ತು ಸಮುದಾಯ ಆರೋಗ್ಯ ಕೇಂದ್ರ ಬಿಡದಿ ಇವುಗಳಿಗೆ ಮೇಲ್ದರ್ಜೆಗನುಗುಣವಾಗಿ ಕಟ್ಟಡಗಳ: ನಿರ್ಮಾಣ ಕಾರ್ಯ ಅಂತಿಮ ಹಂತದಲ್ಲಿದೆ.

ಈ) ಮಾಗಡಿ ತಾಲ್ಲೂಕು ಆಸ್ಪತ್ರೆಯನ್ನು 100 ಹಾಸಿಗೆಗಳಿಗೆ ಹಾಗೂ ಬಿಡದಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಿದ್ದರೂ, ಸದರಿ ಕಟ್ಟಡ ಕಾಮಗಾರಿಗಳು ಪೂರ್ಣಗೊಂಡ ನಂತರವೇ ಮೇಲ್ದರ್ಜೆಗೇರಿಸಿದ್ದಕ್ಕೆ ಅನುಗುಣವಾಗಿ ವೈದ್ಯರು/ಸಿಬ್ಬಂದಿಯನ್ನು ಒದಗಿಸಬೇಕಾಗುತ್ತದೆ. ಆದಾಗ್ಯೂ ಈ ಆಸ್ಪತ್ರೆಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವೈದ್ಯರು ಮತ್ತು ಸಿಬ್ಬಂದಿಯ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಉ) ಕರ್ನಾಟಕ ಲೋಕ ಸೇವಾ ಆಯೋಗದಲ್ಲಿ 562 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಹಾಗೂ 224 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ. ಇದಲ್ಲದೇ, ವಿಶೇಷ ನೇರ ನೇಮಕಾತಿ ಮೂಲಕ 5,021 ಅರೆ ವೈದ್ಯಕೀಯ ಸಿಬ್ಬಂದಿಯನ್ನು ಭರ್ತಿ ಮಾಡುವ ಪ್ರಕ್ರಿಯೆ ಸಹ ಇಲಾಖೆಯಲ್ಲಿ ಜಾರಿಯಲ್ಲಿದೆ. ಈ ನೇಮಕಾತಿ ಪ್ರಕ್ರಿಯೆ ಮೂಲಕ ಲಭ್ಯವಾಗುವ ವೈದ್ಯರು/ ಸಿಬ್ಬಂದಿಯ ಸೇವೆಯನ್ನು ಆದ್ಯತೆಯ ಮೇರೆಗೆ ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುವುದು.

ಪ್ರಶ್ನೆ ಸಂಖ್ಯೆ:– 610 ಅನುಬಂಧ – 1

ಸಾರ್ವಜನಿಕ ಆಸ್ಪತ್ರೆ ಮಾಗಡಿ

ಕ್ರಮ ಸಂಖ್ಯೆ	ಹುದ್ದೆಯ ಪದನಾಮ	ಮಂಜೂರು	ಕಾರ್ಯ ನಿರತ	ಖಾಲಿ
1	ವೈದ್ಯರು	10	8	2
2	ಶುಶ್ರೂಷಕರು	15	8	7
3	ಹಿರಿಯ ಔಷಧಿ ವಿತರಕ	1	1	0
4	ಕಿರಿಯ ಔಷಧಿ ವಿತರಕ	1	1	0
5	ಪ್ರಥಮ ದರ್ಜೆ ಸಹಾಯಕ	1	1	0
6	ದ್ವಿತೀಯ ದರ್ಜೆ ಸಹಾಯಕ	1	1	0
7	ಕಛೇರಿ ಅಧೀಕ್ಷಕ	1	1	0
8	ಕಿರಿಯ ಪ್ರಯೋಗ ಶಾಲಾ ತಂತ್ರಜ್ಞ	1	1	0
9	ಎಕ್ಸ್‌ರೇ ತಂತ್ರಜ್ಞ	3	3	0
10	ಚಾಲಕರು	1	1	0
11	ಗ್ರೂಪ್ – ಡಿ	28	6	22
	ಒಟ್ಟು	**63**	**32**	**31**

ಸಮುದಾಯ ಆರೋಗ್ಯ ಕೇಂದ್ರ ಬಿಡದಿ

ಕ್ರಮ ಸಂಖ್ಯೆ	ಹುದ್ದೆಯ ಪದನಾಮ	ಮಂಜೂರು	ಕಾರ್ಯ ನಿರತ	ಖಾಲಿ
1	ವೈದ್ಯರು	6	2	4
2	ದಂತವೈದ್ಯರು	1	0	1
3	ಶುಶ್ರೂಷಕರು	6	0	6
4	ಕಿರಿಯ ಔಷಧಿ ವಿತರಕ	2	1	1
5	ಪ್ರಥಮ ದರ್ಜೆ ಸಹಾಯಕ	1	1	0
6	ದ್ವಿತೀಯ ದರ್ಜೆ ಸಹಾಯಕ	1	1	0
7	ಕಛೇರಿ ಅಧೀಕ್ಷಕ	1	1	0

8	ಕಿರಿಯ ಪ್ರಯೋಗ ಶಾಲಾ ತಂತ್ರಜ್ಞ	1	1	0
9	ಎಕ್ಸ್‌ರೇ ತಂತ್ರಜ್ಞ	1	1	0
10	ನೇತ್ರ ಸಹಾಯಕರು	1	1	0
11	ಚಾಲಕರು	2	1	1
12	ಗ್ರೂಪ್ – ಡಿ	12	4	8
	ಒಟ್ಟು	**35**	**14**	**21**

ಮಾಗಡಿ ತಾಲ್ಲೂಕಿನ ಹೊಸಪಾಳ್ಯ ಮತ್ತು ಅಜ್ಜನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆ

378 (743) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ಹೊಸಪಾಳ್ಯ ಮತ್ತು ಅಜ್ಜನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಲು ಯಾವಾಗ ಸರ್ಕಾರದಿಂದ ಆದೇಶ ಆಗಿದೆ; ಇದರ ರೂಪುರೇಶೆಗಳೇನು;

ಆ) ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸದಿರಲು ಕಾರಣಗಳೇನು;

ಇ) ಎಷ್ಟು ದಿನದಲ್ಲಿ ಈ ಆಸ್ಪತ್ರೆಗಳನ್ನು ಪ್ರಾರಂಭಿಸಲಾಗುವುದು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ಹೊಸಪಾಳ್ಯ ಮತ್ತು ಅಜ್ಜನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸರ್ಕಾರಿ ಆದೇಶ ದಿನಾಂಕ: 04/10/2007 ರಲ್ಲಿ ಮಂಜೂರು ಮಾಡಲಾಗಿದೆ. ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲು, ಈ ಕೆಳಕಂಡ 3 ನಿಬಂಧನೆಗಳನ್ನು ವಿಧಿಸಲಾಗಿತ್ತು.